(ಇಂದು ದಿನಾಂಕ 06-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

ನನ್ನ ದಾವಾ ಪ್ಯಾರ ನಂ. 7 ರಲ್ಲಿ ಹೇಳಿರುವ ಎಂ ಆರ್ ನಂ. ಹೆಚ್ 78/2012-13, ಮತ್ತು ಎಂ. ಆರ್ ನಂ. ಹೆಚ್ 13 2015 ಇದು ನನ್ನ ಗಮನಕ್ಕೆ 2018 ರ ಕೊನೆಯ ತಿಂಗಳಿನಲ್ಲಿ ನನ್ನ ಗಮನಕ್ಕೆ ಬಂದಿರುತ್ತದೆ. ಇದರ ವಿರುದ್ಧ ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ. 1991 ರಿಂದ 95 ರ ಪಹಣಿ ಪತ್ರಿಕೆಯಲ್ಲಿ 6 ನೇ ಪ್ರತಿವಾದಿಯರ ಹಸ್ತಾಕ್ಷರದ ಆಧಾರದ ಮೇಲೆ 6 ನೇ ಪ್ರತಿವಾದಿಯವರು ಹಂಗಾಮಿ ನೌಕರನಾಗಿ ಕರ್ತವ್ಯ ನಿರ್ವಹಿಸುತ್ತಾನೆ ಎಂದು ಹೇಳಿರುತ್ತಾರೆ. ಅದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. 6 ನೇ ಪ್ರತಿವಾದಿಯವರು ಡಿಸೆಂಬರ್ 2018 ರಂದು ದಾವಾ ಆಸ್ತಿಯಲ್ಲಿ ಕೃಷಿ/ಸಾಗುವಳಿ ಮಾಡಲು ನನಗೆ ಮತ್ತು ವಾದಿಗೆ ಆತಂಕವನ್ನು ವ್ಯಕ್ತಪಡಿಸಿದರು. ನಾವು ನಮ್ಮ ವಕೀಲರಿಗೆ ಸರ್ವೇ ನೊಟೀಸ್ ಬಂದಾಗ ಪಹಣಿ ಪತ್ರಿಕೆಯಲ್ಲಿ ಹಕ್ಕು ಬದಲಾವಣೆ ಆದ ಬಗ್ಗೆ ಮೊದಲ ಬಾರಿಗೆ ನಮ್ಮ ಗಮನಕ್ಕೆ ಬಂದ ವಿಷಯವನ್ನು ತಿಳಿಸಿರುತ್ತೇನೆ. ನಾನು ಮತ್ತು ವಾದಿಯು 1, 2 ಮತ್ತು 6 ನೇ ಪ್ರತಿವಾದಿಯವರಲ್ಲಿ ದಾವಾ ಆಸ್ತಿಗಳ ಕುರಿತು ಪಹಣಿ ಪತ್ರಿಕೆಗಳನ್ನು ಸರಿಪಡಿಸಿ ಕೊಡುವಂತೆ ಕೇಳಿಕೊಂಡಿರುತ್ತೇವೆ. 1, 2 ಮತ್ತು 6 ನೇ ಪ್ರತಿವಾದಿಯವರು ಪಹಣಿ ಪತ್ರಿಕೆಗಳನ್ನು ಸರಿಪಡಿಸಿಕೊಡಲು ನಿರಾಕರಿಸಿದ್ದಕ್ಕೆ ನಾನು ಯಾವುದೇ ನೊಟೀಸ್ ಅನ್ನು ಕೊಟ್ಟಿರುವುದಿಲ್ಲ.

1 ರಿಂದ 5 ನೇ ಪ್ರತಿವಾದಿಯವರು ವೆಂಕಟ್ರಮಣ ವೆಂಕಟ್ರಮಣ ಭಟ್ಟ ಇವರ ಮಕ್ಕಳು ಎಂದರೆ ಸರಿ. 1 ರಿಂದ 5 ಪ್ರತಿವಾದಿಯವರ ತಂದೆ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರ ಹೆಂಡತಿಯ ಹೆಸರು ಮಾದೇವಿ ಎಂದರೆ ಸರಿ. ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರು ಮೃತ ಪಟ್ಟ ನಂತರ ಮಾದೇವಿಯವರ ಹೆಸರು ಅ.ಕು.ಮೆ. ನಾತೆಯಿಂದ ದಾಖಲಾಗಿತ್ತು ಎಂದರೆ ಇರಬಹುದು. ಮಾದೇವಿಯ ಗಂಡ

ಪಿ.ಡಬ್ಲ್ಯು.1

ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರು 22-07-1989 ರಂದು ಮೃತಪಟ್ಟಿರುತ್ತಾರೆ ಎಂದರೆ ಇರಬಹುದು. ಮಾದೇವಿಯವರ ಗಂಡ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರ ಕುಟುಂಬದವರ ಮಾಹಿತಿ ನನಗೆ ಇರುತ್ತದೆ. ಮಾದೇವಿಯವರು ಮೃತ ಪಟ್ಟ ನಂತರ 1 ರಿಂದ 5 ನೇ ಪ್ರತಿವಾದಿಯವರ ಹೆಸರು ದಾಖಲಾಗಿದೆ ಎಂದರೆ ಸರಿ. ದಾವಾ ಆಸ್ತಿಯು ಮಾದೇವಿಯ ಗಂಡ ವೆಂಕಟ್ರಮಣ ವೆಂಕಟ್ರಮಣ ಭಟ್ಟರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಯಾವುದೇ ಕಾಲಕ್ಕೂ ವಾದಿಯ ತಂದೆ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರಿಗೆ ಸೇರಿದ ಆಸ್ತಿ ಆಗಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ವಾದಿಯ ಸಹೋದರರಿಗೆ ಈ ದಾವಾಸ್ತಿಗಳು 1 ರಿಂದ 5 ಪ್ರತಿವಾದಿಯವರ ಪೂರ್ವಜರಾದ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರ ಆಸ್ತಿ ಎಂದು ಗೊತ್ತಿದ್ದ ಕಾರಣ ಈ ದಾವಾ ದಾಖಲು ಮಾಡುವ ವರೆಗೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯವರ ತಂದೆಯ ಹೆಸರು ವೆಂಕಟ್ರಮಣ ವೆಂಕಟ್ರಮಣ ಭಟ್ಟ ಎಂತಲೇ ಇರುವುದರಿಂದ ಅನುಕೂಲ ಪಡೆಯುವ ಉದ್ದೇಶದಿಂದ ಮತ್ತು 1 ರಿಂದ 5 ನೇ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿಯಿಂದ ವೋಕಲ್ತ್ಯಾರು ನಾವೆಯನ್ನು ಪಡೆದು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರ ಪೂರ್ವಜರಾದ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರು 1989 ರಂದು ಮೃತ ಪಟ್ಟ ನಂತರ ವಾದಿಗೆ ಮತ್ತು ಅವರ ಸಹೋದರರಿಗೆ ಅವರ ಹಕ್ಕಿನ ಆಸ್ತಿಗೆ ಮಾಹಿತಿ ಇದ್ದರು ಸಹ ಈಗ ಈ ದಾವೆಯನ್ನು ದಾಖಲುಪಡಿಸಿದ್ದೇವೆ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯವರು 6 ನೇ ಪ್ರತಿವಾದಿಗೆ ನೀಡಿದ ಮೊಕ್ತ್ಯಾರುನಾವೆಯ ಆಧಾರದ ಮೇಲೆ 6 ನೇ ಪ್ರತಿವಾದಿಯವರು ದಾವಾ ಆಸ್ತಿಗಳಲ್ಲಿ ಕಾನೂನು ಬದ್ಧ ವ್ಯವಹಾರಗಳನ್ನು ನಡೆಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ರಿಂದ 5 ನೇ ಪ್ರತಿವಾದಿಯವರಿಗೆ ದಾವಾ ಆಸ್ತಿಯಲ್ಲಿದ್ದ ಸ.ನಂ. 301/2 ಅ ಸ್ಥಳದ ಬಗ್ಗೆ 6 ನೇ ಪ್ರತಿವಾದಿಯು 1 ರಿಂದ 5 ನೇ ಪ್ರತಿವಾದಿಯರಿಗೆ ಮಾರುಕಟ್ಟೆ ಮೌಲ್ಯವನ್ನು ಸಂದಾಯಿಸಿ ನೊಂದಣಿ

ಕ್ರಯ ದಸ್ತಾವೇಜು ಮಾಡಿಸಿ ಈಗಿನವರಿಗೆ 6 ನೇ ಪ್ರತಿವಾದಿಯ ಕಬ್ಜಾದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾಸ್ತಿ ಸ.ನಂ. 394/3 ಈ ಸ್ಥಳದ ಕುರಿತು 1 ರಿಂದ 5 ನೇ ಪ್ರತಿವಾದಿಯವರು ನೀಡಿದ ಕಾನೂನು ಬದ್ದ ಮೊಕ್ತ್ಯಾರುನಾವೆಯ ಆಧಾರದ ಮೇಲೆ 6 ನೇ ಪ್ರತಿವಾದಿಯು ಈ ಸ್ಥಳವನ್ನು 7 ನೇ ಪ್ರತಿವಾದಿಗೆ ಮಾರಾಟ ಮಾಡಿ ಕ್ರಯದ ಹಣವನ್ನು 1 ರಿಂದ 5 ನೇ ಪ್ರತಿವಾದಿಗೆ ಸಂದಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ. 394/3 7 ನೇ ಪ್ರತಿವಾದಿಯ ಕಬ್ಜಾದಲ್ಲಿದೆ ಎಂದರೇ ಸರಿಯಲ್ಲ. ದಾವಾಸ್ತಿಗಳು ವಾದಿಯವರ ತಂದೆ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರ ಹಕ್ಕಿನ ಆಸ್ತಿ ಆಗಿದ್ದೇ ಇರಲಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯು ಮತ್ತು ವಾದಿಯ ತಂದೆಯಾದ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರು ದಾವಾಸ್ತಿಯಲ್ಲಿ ಕೃಷ್ಟಿ ಸಾಗುವಳಿ ಮಾಡಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆ ವೆಂಕಟ್ರಮಣ ವೆಂಕಟ್ರಮಣ ಭಟ್ಟ ರವರು ಮೃತ ಪಟ್ಟ ನಂತರ ವಾದಿಯರು ಮತ್ತು ಅವರ ಸಹೋದರರು ನಿಖರವಾಗಿ ಸರ್ವೇ ನಂ. ಅನ್ನು ನಮೂದಿಸಿ ಪಹಣಿ ಪತ್ರಿಕೆಯಲ್ಲಿ ಬದಲಾವಣೆ ಮಾಡಲು ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಎಲ್ಲಾ ಸರ್ವೇ ನಂ. ಗಳಿಗೆ ಸಂಬಂಧಪಟ್ಟಂತೆ ಬದಲಾವಣೆ ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತೇವೆ. ನಿಖರವಾಗಿ ಸರ್ವೇ ನಂ. ಗಳನ್ನು ನಮೂದಿಸಿ ಅರ್ಜಿ ನೀಡಿರುವುದಿಲ್ಲ. ಈ ರೀತಿ ಅರ್ಜಿ ಸಲ್ಲಿಸುವಾಗ ವಾದಿ ಮತ್ತು ಅವರ ಸಹೋದರಿಗೆ ತಮ್ಮ ತಂದೆಯವರ ಸರ್ವೇ ನಂ. ಗಳ ಮಾಹಿತಿ ಇತ್ತು. ನಿಖರವಾಗಿ ಸ.ನಂ. ಗಳನ್ನು ನಮೂದಿಸಲು ತೊಂದರೆ ಇತ್ತಾ ಎಂದರೆ ಇರಲಿಲ್ಲ. ದಾವಾಸ್ತಿಯಲ್ಲಿ ವಾದಿಯರಿಗೆ ಯಾವುದೇ ಹಕ್ಕಿಲ್ಲ ಎಂಬ ವಿಷಯವರು ವಾದಿಯರಿಗೆ ಗೊತ್ತಿರುವುದರಿಂದ ತಂದೆ ಮೃತ ಪಟ್ಟ ನಂತರ ದಾವಾಸ್ತಿಯಲ್ಲಿ ಯಾವುದೇ ವಾರಿಸು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರ ತಂದೆ ಮೃತ ಪಟ್ಟ 30 ವರ್ಷಗಳ ನಂತರ 1 ರಿಂದ 5 ಪ್ರತಿವಾದಿಗೆ ಸೇರಿರುವ ದಾವಾಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಿ.ಡಬ್ಲ್ಯು.1

**(6 ಮತ್ತು 7 ನೇ ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ